O.S. No.  04/2020 ಡಿ ಡಬ್ಲ್ಯು1

ದಿನಾಂಕಃ 19.12.2025

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ವಿ ವಕೀಲರಿಂದಃ–</u>**

1. ಸರ್ಕಾರದಿಂದ ಭೂ ಸ್ವಾಧೀನ ಆದ ಮೇಲೆ ಸದರಿ ಸ್ವತ್ತನ್ನು ಪಂಚಾಯ್ತಿಗೆ ಕೊಡುವಾಗ ಅದರ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಆಗುತ್ತದೆ ಮತ್ತು ಲೋಕಲ್ ದಿನಪತ್ರಿಕೆಗಳಲ್ಲಿ ಪ್ರಕಟಣೆ ಆಗುತ್ತದೆ ಎಂದರೆ ಸಾಕ್ಷಿ ಆ ರೀತಿ ಯಾವುದೇ ದಾಖಲೆ ಲಭ್ಯ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಮತ್ತು ಈ ಕೇಸಿಗೂ ಮತ್ತು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಹೇಳಿರುವ ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

2. ನಾನು ಹಾಜರುಪಡಿಸಿರುವ ನಿಡಿ – 2 ರಲ್ಲಿ ದಿಃ 26.04.1958 ರ ನಂತರದ ನಡಾವಳಿಗಳು ಟ್ಯಾಂಪರ್ ಆಗಿದೆ ಎಂದರೆ ಸಾಕ್ಷಿ ಆ ಅವಧಿಯದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ದಾಖಲೆಯಲ್ಲಿ ಎಸಿಯವರು ಆದೇಶದ ಮಾಡಿದ ಮೇಲೆ ನಂತರ ನಾವು ಅದರಲ್ಲಿ ಟ್ಯಾಂಪರ್ ಮಾಡಿದ್ದೇವೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಮೇಲೆ ಅದು ಜಿಲ್ಲಾಧಿಕಾರಿಗಳಿಗೆ ಅಂಗೀಕರಣಕ್ಕೆ ಹೋಗುತ್ತದೆ, ಆಗ ಅಲ್ಲಿ ಡಿಸಿ ರವರು ಅದನ್ನು ಅಪ್ರೂಡ್ (Approved) ಎಂದು ಬರೆದು, pronounced in the open court  ಎಂದು ಬರೆಯುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ರೀತಿ ಈ ದಾವಾ ಸ್ವತ್ತಿನ ಬಗ್ಗೆ ಡಿಸಿ ರವರು ಅಂಗೀಕರಣ ಮಾಡಿರುವ ಬಗ್ಗೆ ಮತ್ತು ಅದನ್ನು ನ್ಯಾಯಾಲಯದಲ್ಲಿ ಉಚ್ಚಾರ ಮಾಡಿರುವ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಮ್ಮ ಬಳಿ ಇರುವ ದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

3. ಸರ್ವೆ ನಂಬರ್ 270 ಮತ್ತು 271 ಮಧ್ವರಾವ್ ಮತ್ತು ಮುರುಗೆಪ್ಪ ಗೌಡರಿಗೆ ಅವಾರ್ಡ್ ಆದ ಬಗ್ಗೆ ದಾಖಲೆಗಳಿಲ್ಲ ಎಂದು ಹಿಂಬರಹ  ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಕಡತದಲ್ಲಿ ಇಲ್ಲದೇ ಇರುವ ಕಾರಣ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ಪ್ರಕಾರ ಸರ್ವೆ ನಂಬರ್ 270, 271 ಮತ್ತು ದಾವಾ ಸ್ವತ್ತನ್ನು ಸರ್ಕಾರ ಭೂ ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ಭೂ ಸ್ವಾಧೀನ ಪಕ್ರಿಯೆ ಆಗಿದೆ ಎಂದು ನುಡಿಯುತ್ತಾರೆ. ಆ ರೀತಿ ದಾವಾ ಸ್ವತ್ತನ್ನು ಭೂ ಸ್ವಾಧಿನಪಡಿಸಿಕೊಂಡು ಪರಿಹಾರ ಕೊಟ್ಟಿರುವ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಅವರು ಪರಿಹಾರ ಪಡೆದಿರುವ ಬಗ್ಗೆ ಎಸಿ ರವರ ಕಚೇರಿಯ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕಡತ ನೋಡಿ ನಿಡಿ – 2 ರ 2 ನೇ ಪುಟ ತೋರಿಸಿರುತ್ತಾರೆ.

4. ವಾದಿ ಆ ರೀತಿ ಭೂ ಸ್ವಾಧೀನ ಹಣ ಕೊಟ್ಟಿರುವ ಬಗ್ಗೆ ದಾಖಲೆ ಇದ್ದರೆ ಕೊಡಿ ಎಂದು ಉಪ ವಿಭಾಗಾಧಿಕಾರಿಗಳ ಕಚೇರಿಗೆ ಅರ್ಜಿ ಕೊಟ್ಟಾಗ ಅವರು ಯಾವುದೇ ದಾಖಲೆ ಲಭ್ಯ ಇಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅವರ ಕಚೇರಿಯ ಬಗ್ಗೆ  ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿಃ 10.04.1961 ರಲ್ಲಿ ಬಿಳಕಿ ಗ್ರಾಮ ಪಂಚಾಯ್ತಿಯಲ್ಲಿ ನಿವೇಶನ ಮಂಜೂರು ಮಾಡಲು ಅರ್ಜಿ ಬಂದಿದ್ದು, ಆಗ ನಿವೇಶನ ಮಂಜೂರು ಮಾಡಲು ದಾವಾ ಸ್ವತ್ತನ್ನು ಸಾವಧೀನಪಡಿಸಿಕೊಳ್ಳಬೇಕು ಎಂದು ಗ್ರಾಮ ಪಂಚಾಯ್ತಿಯಲ್ಲಿ ಠರಾವು ಆಗಿದೆ ಎಂದರೆ ಸಾಕ್ಷಿ ಕಡತ ಪರಿಶೀಲನೆ ಮಾಡಬೇಕು ಎಂದು ನುಡಿಯುತ್ತಾರೆ. ಆ ರೀತಿ ಠರಾವು ಆದಾಗ ಮುರುಗೆಪ್ಪ ಗೌಡ ಎಂಬುವವರು ಅಧ್ಯಕ್ಷರಾಗಿದ್ದು, ಅವರ ಉಪಸ್ಥಿತಿಯಲ್ಲಿ ಆ ರೀತಿ ಠರಾವು ಆಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5.  5 ನೇ ಪ್ರತಿವಾದಿಗೆ ಹಕ್ಕು ಪತ್ರ ಕೊಟ್ಟ ಮೇಲೆ ಅವರಿಗೆ ಕಂದಾಯ ನಿಗದಿ ಮಾಡಿದ್ದೀರಾ ಎಂದರೆ ಸಾಕ್ಷಿ ಹಿಂದೆ ಹಕ್ಕು ಪತ್ರ ಕೊಟ್ಟಿದ್ದು, ನಾನು ಬರುವ ಸಮಯಕ್ಕೆ ನ್ಯಾಯಾಲಯದಲ್ಲಿ ದಾವೆ ಇದ್ದ ಕಾರಣ ಅದರ ಮೇಲೆ ನಾನು ಯಾವುದೇ ಪ್ರಕ್ರಿಯೆ

ಮುಂದುವರೆಸಲು ಬರುವುದಿಲ್ಲ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಗೆ ಹಕ್ಕು ಪತ್ರ ನೀಡುವಾಗ ಆ ರೀತಿ ಮಂಜೂರು ಮಾಡಲು ಸಾಗರದ ಉಪ ವಿಭಾಗಾಧಿಕಾರಿಗಳ ಅನುಮತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ನಮ್ಮ ಪಂಚಾಯ್ತಿಯಿಂದ ಕಡತ ಇಲ್ಲ ಎಂದು ವಾದಿಗೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದರಲ್ಲಿ ಉಪ ವಿಭಾಗಾಧಿಕಾರಿಗಳ ಆದೇಶ ಇಲ್ಲ ಎಂದು ಮಾತ್ರ ನಮೂದಿಸಿದೆ ಎಂದು ನುಡಿಯುತ್ತಾರೆ.

6. 5 ನೇ ಪ್ರತಿವಾದಿಗೆ ನಾವು ಹಕ್ಕು ಪತ್ರವನ್ನು ಸೃಷ್ಟಿಸಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಕೊಟ್ಟಿರುವ ಹಕ್ಕು ಪತ್ರದಲ್ಲಿ ಅಧ್ಯಕ್ಷರ ಸಹಿಯನ್ನೂ ಸಹ ಪೋರ್ಜರಿ ಮಾಡಿ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ಅದನ್ನು ನಾನು ಪರಿಶೀಲನೆ ಮಾಡಿಲ್ಲ ಎಂದು ನುಡಿಯುತ್ತಾರೆ. ನನಗೆ ಆ ರೀತಿ ಸಹಿ ಪೋರ್ಜರಿ ಆಗಿರುವ ಬಗ್ಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 270/2, 271/1, 3, 4 ರ ಪಹಣಿಗಳು ಇವತ್ತಿನವರೆಗೂ ವಾದಿ, ಲೋಕಪ್ಪ  ಗೌಡ, ಬಸಪ್ಪಗೌಡ, ಚಂದ್ರಪ್ಪಗೌಡ, ಮಹೇಶ್ ಗೌಡ ಮತ್ತು ಎಂ ಜಿ ಉಮೇಶ್ ಗೌಡರ ಹೆಸರಿಗೆ ಇವತ್ತಿನವರೆಗೂ ಪಹಣಿ ಇವೆ ಎಂದರೆ ಸಾಕ್ಷಿ ಭೂ ಸ್ವಾಧೀನ ಪ್ರಕ್ರಿಯೆ ಆದ ಮೇಲೆ ಕಂದಾಯ ಇಲಾಖೆಯವರು ಅದನ್ನು ಕಡಿಮೆ ಮಾಡಬೇಕಾಗಿತ್ತು, ಮಾಡದೇ ಇರುವ ಕಾರಣ ಹಾಗೇ ಮುಂದುವರೆದಿದೆ ಎಂದು ನುಡಿಯುತ್ತಾರೆ.

7. 5 ನೇ ಪ್ರತಿವಾದಿಗೆ ಕಟ್ಟಡ ಕಟ್ಟಲು ನಿಮ್ಮ ಕಚೇರಿಯಿಂದ ಪರವಾನಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ಅವಧಿಯಲ್ಲಿ ಕೊಟ್ಟಿಲ್ಲ, ಮೊದಲಿನದು ನನಗೆ ಗೊತ್ತಿಲ್ಲ, ಪರಿಶೀಲನೆ ಮಾಡಬೇಕು ಎಂದು ನುಡಿಯುತ್ತಾರೆ. ಆ ರೀತಿ ನಮ್ಮ ಕಚೇರಿಯಿಂದ ಯಾವುದೇ ಪರವಾನಿಗೆ ಪಡೆಯದೆ 5 ನೇ ಪ್ರತಿವಾದಿ ಕಟ್ಟಡ ಕಟ್ಟುತ್ತಿದ್ದಾರೆ ಎಂದು ನಮ್ಮ ಗಮನಕ್ಕೆ ತಂದಿದ್ದರೂ ನಾವು ಅದರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ನಾವು ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. 3 ನೇ ವ್ಯಕ್ತಿಗಳ ಜಮೀನಿನಲ್ಲಿ

ಬೇರೆ ಯಾರಾದರೂ ಕಟ್ಟಡ ಕಟ್ಟಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬ ಆದೇಶ ನಮಗೆ ಇದೆ ಎಂದರೆ ಸಾಕ್ಷಿ ಆ ರೀತಿ ತೆಗೆದುಕೊಳ್ಳುತ್ತೇವೆ, ಆದರೆ ಇದು ವಿವಾದ ಬಾಕಿ ಇರುವ ಕಾರಣ ಕ್ರಮ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

8. ಸರ್ವೆ ನಂಬರ್ 270 ರಲ್ಲಿ ವಾದಿ ತನ್ನ ಹೆಸರಿಗೆ ಖಾತೆ ಮಾಡಲು ಅರ್ಜಿ ಕೊಟ್ಟಿದ್ದರೂಾ ಅದನ್ನು ವಜಾ ಮಾಡಿದ್ದೇವೆ ಎಂದರೆ ಸಾಕ್ಷಿ ಒಂದು ಬಾರಿ ಭೂ ಸ್ವಾಧೀನ ಪ್ರಕ್ರಿಯೆ ಆದ ಮೇಲೆ ಮಾಲೀಕನಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 12.11.2003 ರಂದು ವಾದಿಯ ಹೆಸರನ್ನು ಡಿಮಾಂಡ್ ರಿಜಿಸ್ಟರ್ ನಲ್ಲಿ ಕೊನೆಯ ಸಂಖ್ಯೆಯಾಗಿ ಸೇರಿಸಬಹುದು ಎಂದು ನಮ್ಮ ಗ್ರಾಮ ಪಂಚಾಯ್ತಿಯಲ್ಲಿ ನಡವಳಿಕೆ ಆಗಿದೆ ಎಂದರೆ ಸಾಕ್ಷಿ ಸದರಿ ದಾಖಲೆ ನೋಡಿ ಆ ರೀತಿ ಬರೆದಿದ್ದಾರೆ, ಆದರೆ ನನ್ನ ಅವಧಿಯಲ್ಲಿ ಯಾವುದೇ ನಡವಳಿಕೆ ಆಗಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ಯಾವತ್ತೂ ಭೂ ಸ್ವಾಧೀನ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಾದಿಗೆ ಪರಿಹಾರ ಕೊಟ್ಟರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂದು ಸುಳ್ಳು ತಿಳಿಸಿದ್ದೇನೆ ಎಂದರೆ ಸರಿಯಲ್ಲ.

9. ದಿಃ 31.10.1959 ರಂದು ಉಪವಿಭಾಗಾಧಿಕಾರಿಗಳು ಎಲ್ ಎ ಸಿ ನಂ. 29/1957-58 ರಂತೆ ಜಮೀನು ಭೂ ಸ್ವಾಧೀನಪಡಿಸಿಕೊಂಡ ಬಗ್ಗೆ ತಿಳಿಸಿದ್ದು, ಅದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಭೂ ಸ್ವಾಧೀನ ಆದ ಮೇಲೆ ಕಂದಾಯ ದಾಖಲೆಗಳಲ್ಲಿ ಯಾವ ವಿಚಾರಕ್ಕೆ ನಮೂದು ಮಾಡಿಲ್ಲ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದು ಅದು ಹಿಂದಿನವರು ಮಾಡಿಲ್ಲ ಎಂದು ನುಡಿಯುತ್ತಾರೆ. ಸ್ವತ್ತನ್ನು ಭೂ ಸ್ವಾಧೀನ ಮಾಡಿಕೊಂಡ ಮೇಲೆ ಪುನಃ ಎಸಿ ರವರು ಅದನ್ನು ಮರು ಮಂಜೂರು ಮಾಡಬಹುದಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10. ದಿಃ 13.03.1975 ರಂದು ದಾವಾ ಸ್ವತ್ತನ್ನು ವಾದಿಯ ತಂದೆಗೆ ಎಸಿ ರವರು ಮರು ಮಂಜೂರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಆದೇಶದಲ್ಲಿ ಮಧ್ವರಾವ್ ರವರಿಗೂ ಮಂಜೂರು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನು ಭೂ ಸ್ವಾಧೀನ ಆಗಿದೆ ಎಂದು ಸುಳ್ಳು ಪ್ರಮಾಣಾ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಶಿಕಾರಿಪುರ.**